2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ**118/2016**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ಕೆ.ವಿ. ಬೇಬಿ ಯಾನೆ ದೇವಸ್ಯ | ಪಿಡಬ್ಲೂ - 7 |
| ತಂದೆಯ ಹೆಸರು | - | ಕೆ.ಕೆ. ವರ್ಗೀಸ್ | ಸಿಡಬ್ಲೂ - 12 |
| ವಯಸ್ಸು | - | 56 ವರ್ಷ | |
| ಉದ್ಯೋಗ | - | ಕೂಲಿ | |
| ವಾಸ ಸ್ಥಳ | - | ನಾಗಲಪುರ ಗ್ರಾಮ, ಎನ್.ಆರ್. ಪುರ | |

ದಿನಾಂಕಃ 04-07-2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಮಾನ್ಯ ಪಿ.ಪಿ. ರವರಿಂದ -

1. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇರುತ್ತದೆ. ಪಿರ್ಯಾದಿ ಪ್ರಸೀದ್ ಗೊತ್ತು. ಅಂದಾಜು 4 ವರ್ಷಗಳ ಹಿಂದೆ ಸುಮಾರು ಮದ್ಯಾಹ್ನ 3.30 ರಿಂದ 4.00 ಗಂಟೆ ಸುಮಾರಿಗೆ ನನ್ನನ್ನು ಮತ್ತು ಬಾಬು ರವರನ್ನು ಪೊಲೀಸರು ಪಿರ್ಯಾದಿ ಪ್ರಸೀದ್ ರವರ ಮನೆಗೆ ಕರೆಸಿರುತ್ತಾರೆ. ಆ ಸಮಯದಲ್ಲಿ ಪೊಲೀಸರ ವಶದಲ್ಲಿ ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳು ಇದ್ದರು. ಸದರಿ ಆರೋಪಿಗಳು ಪಿರ್ಯಾದಿ ಪ್ರಸೀದ್ ರವರ ಮನೆಯಲ್ಲಿ ಕಂಪ್ಯೂಟರ್, ಇಲೆಕ್ಟ್ರಿಕ್ ಸ್ಟವ್ , ಚಾರಜರ್ Torch ಮಂತಾದವುಗಳನ್ನು ಪ್ರಸೀದ್ ರವರ ಮೂಗಿನ ಮೇಲೆ ಹಲ್ಲೆ ಮಾಡಿ ತೆಗೆದುಕೊಂಡು ಹೋಗಿದ್ದರ ಕುರಿತು ಪೊಲೀಸರಿಗೆ ಹೇಳಿದರು. ಸದರಿ ಆರೋಪಿಗಳು ಪೊಲೀಸರ ಮುಂದೆ ತಾವು ಒಬ್ಬೊಬ್ಬರಾಗಿ ಮಾಡಿದ ಕೃತ್ಯದ ಸ್ಥಳವನ್ನು ತೋರಿಸಿದರು. ನಂತರ ಆರೋಪಿಗಳು

ತೋರಿಸಿದಂತೆ ಪೊಲೀಸರು ಸದರಿ ಕೃತ್ಯ ಸ್ಥಳದ ಪೋಟೋ ತೆಗೆದು ಮಹಜರ್ ಮಾಡಿರುತ್ತಾರೆ. ನಾನು ಸಹ ಸದರಿ ಮಹಜರ್ ಗೆ ಪ್ರಸೀದ್ ರವರ ಮನೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ಮಹಜರ್ ನ್ನು ಈಗ ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.17 ಎಂದು ಗುರುತಿಸಲಾಯಿತು ಮತ್ತು ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿ.ಪಿ.17(ಎ) ಎಂದು ಗುರುತಿಸಲಾಯಿತು. ನಿ.ಪಿ.17 ರಡಿಯಲ್ಲಿ ಮಾಡಲಾದ ಕೃತ್ಯ ನಡೆದ ಸ್ಥಳದ ಮಹಜರ್ ಗೆ ಸ್ಥಳವನ್ನು ತೋರಿಸಿದ ಆರೋಪಿಗಳು ಈಗ ನ್ಯಾಯಾಲಯದ ಮುಂದಿರುವ ಆರೋಪಿಗಳೇ ಆಗಿರುತ್ತಾರೆ.

(1 ನೇ ಆರೋಪಿಯು ಗೈರು ಹಾಜರಾಗಿದ್ದು, ಅವರ ಪರ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿ ಅವರ ಗುರುತಿಸುವಿಕೆಯನ್ನು ಅಲ್ಲಗಳೆಯುವುದಿಲ್ಲ ಎಂದು ಹೇಳಿರುತ್ತಾರೆ. )

<u>ಪಾಟೀ ಸವಾಲು ಶ್ರೀ ಐ.ಎಸ್.ಟಿ. ವಕೀಲರಿಂದ – 6 ನೇ ಆರೋಪಿತರ ಪರವಾಗಿ</u>

2. ನನಗೆ ಪಿರ್ಯಾದಿ ಪ್ರಸೀದ್ ಸುಮಾರು 10 ವರ್ಷದಿಂದ ಪರಿಚಯವಿರುತ್ತಾರೆ. ನಾನು ಸದರಿ ದಿನದಂದು ಪ್ರಸೀದ್ ರವರ ಮನೆಗೆ ಹೋದಾಗ ಬಹಳಷ್ಟು ಜನ ಸೇರಿದ್ದರು. ನಾನು ಹೋದ ಮೇಲೆ ನಂತರ ಪೊಲೀಸರು ಸದರಿ ಸ್ಥಳಕ್ಕೆ ಬಂದಿರುತ್ತಾರೆ. ನನ್ನ ಮುಂದೆ ಪೊಲೀಸರು ಯಾರದು ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ಸದರಿ ದಿನದಂದು 5-6 ಜನ ಪೊಲೀಸರು ಜೊತೆ ವ್ಯಾನಿನಲ್ಲಿ 6 ಜನ ಆರೋಪಿಗಳು ಸ್ಥಳಕ್ಕೆ

ಬಂದಿದ್ದರು. ಪೊಲೀಸರು ಸದರಿ ಆರೋಪಿಗಳನ್ನು ಅವರ ಕೈಗಳಿಗೆ ಬೇಡಿ ಹಾಕಿಕೊಂಡು ಅವರ ಮುಖಗಳಿಗೆ ಮುಖ ಕವಚ ಹಾಕಿಕೊಂಡು ಕರೆದುಕೊಂಡು ಬಂದಿದ್ದರು. ಅಲ್ಲಿ ಪೊಲೀಸರು ನನಗೆ ಯಾರನ್ನು ಪರಿಚಯ ಮಾಡಿಕೊಡಲಿಲ್ಲ.

3. ಆರೋಪಿಗಳು ನನಗೆ ಪರಿಚಯವಿಲ್ಲದಿರುವುದರಿಂದ ನನಗೆ ಅವರ ಹೆಸರುಗಳನ್ನು ಹೇಳಲು ಆಗುವುದಿಲ್ಲ. ಪೊಲೀಸರು ಮಹಜರ್ ಮಾಡುವ ಸಮಯದಲ್ಲಿ ಆರೋಪಿಗಳು ತಾವು ಏನೇನು ಮಾಡಿದ್ದೆವು ಎಂಬುದನ್ನು ಹೇಳಿದ್ದರು. ಯಾರು ಯಾರು ಆ ದಿನ ಪೊಲೀಸರ ಮುಂದೆ ಏನು ಹೇಳಿದ್ದರು ಎಂದು ನನಗೆ ಹೇಳಲು ಆಗುತ್ತದೆ. ಆ ದಿನ 3 ನೇ ಆರೋಪಿಯು ಪ್ರಸೀದ್ ನ ಮೂಗಿಗೆ ಹೊಡೆದಿರುತ್ತೇನೆ ಎಂದು ಹೇಳಿರುತ್ತಾನೆ. 5 ನೇ ಆರೋಪಿಯು ತಾನು ಪ್ರಸೀದ್ ರವರ ಮನೆಯಿಂದ Stove ತೆಗೆದುಕೊಂಡಿರುತ್ತೇನೆ ಎಂದು ಹೇಳಿರುತ್ತಾನೆ. 4 ನೇ ಆರೋಪಿಯು ತಾನು ಪ್ರಸೀದ್ ರವರ ಮನೆಯಿಂದ ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್ ತೆಗೆದುಕೊಂಡಿರುತ್ತೇನೆ ಎಂದು ಹೇಳಿರುತ್ತಾನೆ. 2 ನೇ ಆರೋಪಿ ತಾನು ಪ್ರಸೀದ್ ರವರ ಮನೆಯಲ್ಲಿದ್ದ ಗೋದ್ ರೇಜ್ ಬೀರುವಿನ ಬೀಗ ತೆಗೆದಿರುತ್ತೇನೆ ಎಂದು ಹೇಳಿರುತ್ತಾನೆ. 1 ನೇ ಆರೋಪಿಯು ಆ ಸಮಯದಲ್ಲಿ ಏನು ಮಾತನಾಡದೇ ಹೊರಗೆ ನಿಂತಿದ್ದರು. ಆರೋಪಿಗಳು ಹೇಳಿದ ವಿಷಯವನ್ನು ಪೊಲೀಸರು ಮಹಜರ್ ನಲ್ಲಿ ಬರೆದಿದ್ದಾರೋ ಇಲ್ಲವೋ ಗೊತ್ತಿಲ್ಲ. ಆದರೆ ನನ್ನ ಮುಂದೆ

ಆರೋಪಿಗಳು ಕೃತ್ಯ ನಡೆದ ಬಗ್ಗೆ ಹೇಳಿರುವ ವಿಷಯವನ್ನು ಕೇಳಿಸಿಕೊಂಡಿರುತ್ತೇನೆ, ಆದರೆ ಮಹಜರ್ ನಲ್ಲಿ ಏನು ಬರೆದಿರುತ್ತಾರೆ ಎಂಬುದು ಗೊತ್ತಿಲ್ಲ. ಮತ್ತೆ ಪೊಲೀಸರು ನನ್ನನ್ನು ಆ ದಿನ ಪ್ರಸೀದ್ ರವರ ಮನೆಯಲ್ಲಿ ಕರೆಸಿದ್ದು ಬಿಟ್ಟರೆ ನಂತರವಾಗಲಿ ಮತ್ತು ಆ ದಿನದ ಹಿಂದೆಯಾಗಲಿ ಕರೆಸಿರುವುದಿಲ್ಲ. ನನಗೆ ಈ ದಿನ ಪೊಲೀಸರು ಇದೇ ರೀತಿ ಸಾಕ್ಷಿ ಹೇಳಬೇಕು ಎಂದು ಹೇಳಿದ್ದರಿಂದ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸದರಿ ದಿನದಂದು ಪ್ರಸೀದ್ ರವರ ಮನೆಗೆ ಪೊಲೀಸರು , ಆರೋಪಿಗಳೊಂದಿಗೆ ಬಂದಿರುವುದಿಲ್ಲ, ನನ್ನನ್ನು ಪೊಲೀಸರು ಕೃತ್ಯ ನಡೆದ ಸ್ಥಳದ ಮಹಜರ್ ಗೆ ಪಂಚರಾಗಲು ಕರೆದಿರುವುದಿಲ್ಲ, ಆರೋಪಿಗಳು ಆ ದಿನ ನನ್ನ ಮುಂದೆ ಮತ್ತು ಪೊಲೀಸರ ಮುಂದೆ ತಾವು ಮಾಡಿದ ಕೃತ್ಯಗಳ ಬಗ್ಗೆ ಹೇಳಿರುವುದಿಲ್ಲ ಮತ್ತು ನನ್ನ ಮುಂದೆ ಪೊಲೀಸರು ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಪೊಲೀಸರು ಆರೋಪಿಗಳ ಪೋಟೋ ಮತ್ತು ವಿಡಿಯೋ ಮಾಡಿಕೊಂಡಿರುತ್ತಾರೆ.

ಪಾಟೀ ಸವಾಲು ಶ್ರೀ ಹೆಚ್.ಎ.ಟಿ. ವಕೀಲರಿಂದ – 1 ರಿಂದ 5 ನೇ ಆರೋಪಿತರ ಪರವಾಗಿ

5. 6 ನೇ ಆರೋಪಿತನ ಪರ ಮಾಡಲಾದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲಾಯಿತು. .

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

(ಮಂಜುನಾಥ ಸಂಗ್ರೇಶಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಮಾಃ